# ತತ್ತ್ವಲೋಕ

ಪ್ರತಿಯೊಬ್ಬರೂ ಒಂದಲ್ಲಾ ಒಂದು ಹಂತದಲ್ಲಿ ವಿಚಾರ ಮಾಡಿದ್ದುಂಟು. ಅವರು ತತ್ತ್ವಜಿಜ್ಞಾಸೆಗೆ ತೊಡಗಿದ್ದು ನಾಗರೀಕತೆ ಬೆಳೆದು ಜ್ಞಾನೋಪಲಬ್ಧಿ ದೊರಕಿದ ಮೇಲೆಯೇ. ಮೂಲತಃ ತತ್ತ್ವಜಿಜ್ಞಾಸೆಗೆ ವಿಷಯಗಳು ಮೂರು. ಮೊದಲನೆಯದು ಚಿತ್, ಇದು ಚೈತನ್ಯ ಸ್ವರೂಪಿಯಾದ ಆತ್ಮ. ಎರಡನೆಯದು, ಅಚಿತ್ ಅಥವ ಅಚೇತನವೂ ಜಡವೂ ಆದ ಪ್ರಪಂಚ. ಮೂರನೆಯದು, ಇವೆರಡಕ್ಕೂ ಕಾರಣವಾದ ಈಶ್ವರ. ಪ್ರತಿಯೊಬ್ಬ ಮನುಷ್ಯನಿಗೂ ಅವನ ಮನಸ್ಸಿನಲ್ಲಿ ಜೀವನಕ್ಕೆ ಸಂಬಂಧಪಟ್ಟ ಪ್ರಶ್ನೆಗಳು ಹುಟ್ಟುತ್ತಲೇ ಇರುತ್ತವೆ. ಇದು ಸಹಜ ಕೂಡ. ಹುಟ್ಟು–ಸಾವುಗಳೆಂದರೇನು? ಈ ಪ್ರಪಂಚದಲ್ಲಿರುವ ಎಲ್ಲಾ ಭೂತಗಳೂ ಎಲ್ಲಿಂದ ಬಂದುವು? ಹೇಗೆ ಬಂದುವು? ಅವು ಹೇಗೆ ಜೀವಿಸಿವೆ? ಕೊನೆಗೆ ಅವುಗಳ ಗತಿ ಏನಾಗುತ್ತವೆ? ದೇಹ ಬೇರೆ, ಆತ್ಮ ಬೇರೆಯೆ? ಆತ್ಮವೆಂದರೇನು? ಮರಣದ ಅನಂತರ ಮನುಷ್ಯನ ಗತಿ ಏನಾಗುತ್ತದೆ? ಇತ್ಯಾದಿ ಪ್ರಶ್ನೆಗಳು ಮತ್ತೆಮತ್ತೆ ಬರುತ್ತಲೇ ಇರುತ್ತವೆ. ಇಂತಹ ಪ್ರಶ್ನೆಗಳಿಗೆ ಮಾನವ ಸಂಸ್ಕೃತಿಯ ಇತಿಹಾಸದಲ್ಲಿ ದೇಶ, ಕಾಲ, ಸಂಸ್ಕೃತಿಯ ಮಟ್ಟಗಳನ್ನು ಅನುಸರಿಸಿ ತಾತ್ತ್ವಿಕರಿಂದ ಬೇರೆಬೇರೆ ಉತ್ತರಗಳು ಬರುತ್ತಲೇ ಇವೆ. ಉತ್ತರಗಳು ಬದಲಾದದ್ದು ಉಂಟು. ಆದರೆ, ಪ್ರಶ್ನೆಗಳು ಮಾತ್ರ ಶಾಶ್ವತವಾಗಿ ಉಳಿದೇ ಇವೆ.

ಇಂಥ ಪ್ರಶ್ನೆಗಳನ್ನು ಆದಿಕಾಲದ ಉಪನಿಷತ್ತುಗಳಲ್ಲೂ ಬಂದದ್ದುಂಟು. ಅಲ್ಲಿ ಹಲವು ಬಗೆಯ ಉತ್ತರಗಳನ್ನು ಋಷಿಗಳು ನೀಡಿದ್ದಾರೆ. ಬಾಳಿನ ಬಗೆಗೆ ನಮಗೆ ತಿಳಿದಿರುವುದಂತೂ ಅತ್ಯಲ್ಪವೇ. ಆದರೆ, ಜೀವನರಹಸ್ಯವನ್ನು ಭೇದಿಸುವ ಸಾಹಸವಂತೂ ಸಂತತವಾಗಿ ನಡೆಯುತ್ತಲೇ ಇದೆ. ಇಷ್ಟಾದರೂ ಜೀವನದ ಆದಿ–ಅಂತ್ಯಗಳ ರಹಸ್ಯವಂತೂ ಅತಿಗೂಢವಾಗಿಯೇ ಉಳಿದಿದೆ. ಈ ನಡುವಿನ ಬಾಳು ಮಾತ್ರ ನಮಗೆ ಪರಿಚಿತವಾಗಿದೆ. ಅದಕ್ಕೆ ಹಿಂದೇನು ಮುಂದೇನು ಎಂಬುದು ಭೇದಿಸಲು ಅಸಾಧ್ಯವಾದ ರಹಸ್ಯ. ಕಗ್ಗತ್ತಲೆಯ ರಾತ್ರಿಯಲ್ಲಿ ಒಂದು ಹಕ್ಕಿ ಒಂದು ಮನೆಯ ಮುಂಬಾಗಿಲಿನಿಂದ ಒಳಕ್ಕೆ ಬಂದು ಹಿಂಬಾಗಿಲಿನಿಂದ ಹೊರಕ್ಕೆ ಹಾರಿಹೋಗುತ್ತದೆ ಎಂದು ಇಟ್ಟುಕೊಳ್ಳೋಣ. ಆ ಹಕ್ಕಿ ಎಲ್ಲಿಂದ ಬಂದಿತು? ಎಲ್ಲಿಗೆ ಹೋಯಿತು? ಎಂದು ಅದನ್ನು ಕಂಡವರು ತಮಗೆ ತೋಚಿದಂತೆ ಚರ್ಚಿಸುವುದು ಸಹಜ. ಅದರಂತೆ, ಜಿಜ್ಞಾಸುಗಳೂ ಚಿಂತನಾಪರರೂ ಧೃತಿಗೆಡದೆ ತತ್ತ್ವಲೋಕದ ಸಮಸ್ಯೆಗಳನ್ನು ವಿಮರ್ಶಿಸಿ, ವಿಂಗಡಿಸಿ ಅವನ್ನು ಈ ಮೂರು ಪ್ರಧಾನತತ್ತ್ವಗಳಿಗೆ ಇಳಿಸಿದ್ದಾರೆ. ಇವೇ ಮೇಲೆ ಹೇಳಿದ ಆತ್ಮ, ಜಗತ್ತು ಮತ್ತು ಈಶ್ವರ ತತ್ತ್ವಗಳು.

ಮೇಲೆ ಹೇಳಿದ ಮೂರು ತತ್ತ್ವಗಳೂ ಜಿಜ್ಞಾಸೆಗೊಳಪಟ್ಟ ವಿಷಯಗಳಷ್ಟೆ. ಇವನ್ನು ಶಾಸ್ತ್ರೀಯ ಪರಿಭಾಷೆಯಲ್ಲಿ 'ಪ್ರಮೇಯ'ಗಳೆಂದು ಕರೆಯುತ್ತಾರೆ. ಈ ಮೂರು ಪ್ರಮೇಯಗಳ ಸತ್ಯಾಸತ್ಯಗಳು, ಸ್ವಭಾವ ಮತ್ತು ಪರಸ್ಪರ ಸಂಬಂಧಗಳನ್ನು ಯುಕ್ತಿಯುಕ್ತವಾಗಿ ವಿಚಾರಮಾಡಿ, ವಿಮರ್ಶಿಸಿ, ಸಿದ್ಧಾಂತಗಳನ್ನು ರೂಪಿಸುವುದೇ ದರ್ಶನಗಳ ಗುರಿ. ಚಾರ್ವಾಕ, ಬೌದ್ಧ, ಜೈನ, ವೈದಿಕ ಮುಂತಾದ ದರ್ಶನಗಳು ತಮ್ಮತಮ್ಮ ಪ್ರಮಾಣಗಳ ನೆಲೆಯಲ್ಲಿ ಸಿದ್ಧಾಂತಗಳನ್ನು ಮಾಡುತ್ತಾರೆ. ನಾವಿಲ್ಲಿ ತಿಳಿಯಬೇಕಾದ ಒಂದು ಸಂಗತಿ ಉಂಟು. ಆಯಾಯ ದರ್ಶನಗಳನ್ನು ಹಿಡಿದು ಸಿದ್ಧಾಂತ ಮಾಡಬೇಕಾದರೆ ಕೆಲವು ವಿಶ್ವಾಸನೀಯವಾದ ಸಾಧನಗಳು ಬೇಕು. ಈ ಸಾಧನಗಳಿಗೆ ಹಿಂದಿನವರು 'ಪ್ರಮಾಣ'ಗಳೆಂದು ಹೆಸರು ಕೊಟ್ಟರು. ಈ ಪ್ರಮಾಣಗಳ ಆಧಾರದ ಮೇಲೆ ಪ್ರಮೇಯಗಳ ಸ್ವರೂಪ, ಸ್ವಭಾವ ಮೊದಲಾದವುಗಳನ್ನು ನಿರ್ಣಯಿಸಿದರು. ಪ್ರಮಾಣಗಳಿಂದ ವಸ್ತುಗಳ ಯಥಾರ್ಥವಾದ ಜ್ಞಾನವನ್ನು ಪಡೆಯಲು ನಮಗೆ ಸಾಧ್ಯವಾಗುತ್ತದೆ. ಈ ಯಥಾರ್ಥಜ್ಞಾನಕ್ಕೆ 'ಪ್ರಮೆ' ಎಂದು ಹೆಸರು. ಯಾವುದಾದರೊಂದು ವಸ್ತುವನ್ನು ಅದು ಇರುವಂತೆಯೇ ತಿಳಿಯುವುದಕ್ಕೆ ಯಥಾರ್ಥಜ್ಞಾನವೆಂದೂ ಪ್ರಮೆಯೆಂದೂ ಕರೆದರು. ಹಾಗಲ್ಲದೆ ತಪ್ಪಾಗಿ ತಿಳಿದರೆ, ಅದಕ್ಕೆ 'ಭ್ರಮೆ' ಎಂದು ಕರೆದರು. ಇದನ್ನು ಒಂದು ಉದಾಹರಣೆ ಮೂಲಕ ತಿಳಿಯೋಣ. ದೂರದಲ್ಲಿ ಹಗ್ಗವೊಂದು ಬಿದ್ದಿದೆ. ಮೊದಲು ನೋಡಿದಾಗ ಅದು ಹಾವೆಂದು ನಮಗೆ ಭಾವಿತವಾಗುತ್ತದೆ. ಸ್ವಲ್ಪ ಹತ್ತಿರಕ್ಕೆ ಹೋಗಿ ನೋಡಿದಾಗ ಅದು ಹಾವಲ್ಲ ಹಗ್ಗವೆಂದು ತಿಳಿಯುತ್ತದೆ. ಹಗ್ಗವೆಂದು ತಿಳಿಯದೆ, ಹಾವೆಂದು ತಿಳಿದಾಗ 'ಭ್ರಮೆ'. ಅದು ಹಾವಲ್ಲ ಹಗ್ಗವೆಂದು ತಿಳಿದಾಗ 'ಪ್ರಮೆ'. ಇಂಥ ಪ್ರಮೆಗೆ ಸಾಧನವೇ ಪ್ರಮಾಣ. ಇಂಥ ಪ್ರಮಾಣಗಳ ಮೂಲಕವೇ ಪ್ರಮೇಯಗಳ 'ಪ್ರಮೆ'ಯನ್ನು ತಿಳಿಯಲು ಸಾಧ್ಯ.

'ಪ್ರಮೆ' ಎಂದರೆ ಅದು ಯಥಾರ್ಥಜ್ಞಾನವೆಂದೇನೊ ನಾವು ಹೇಳಿಬಿಟ್ಟೆವು. ಹಾಗೆಂದರೆ ಏನು? ಈ ಪ್ರಶ್ನೆಗೆ ನಾನಾ ಉತ್ತರಗಳು ನಮ್ಮಲ್ಲೂ ಪಶ್ಚಿಮದವರಲ್ಲೂ ಬಂದಿವೆ. ಚಾರ್ವಾಕರಿಗೆ ಇಂದ್ರಿಯಗಳಿಗೆ ಗೋಚರವಾಗುವ ಎಲ್ಲಾ ಅನುಭವಗಳೂ ಪ್ರಮೆಯೇ. ಹೀಗಾಗಿ, ಅವರಿಗೆ ಪ್ರತ್ಯಕ್ಷವೇ ಪ್ರಮಾಣ. ಬೌದ್ಧ ಮತ್ತು ನೈಯಾಯಿಕರಿಗೆ 'ಅನುಮಾನ' ಪ್ರಮಾಣ. ಆಸ್ತಿಕ ದರ್ಶನಗಳಿಗೆಲ್ಲ ಶಬ್ದ ಅಥವ ವೇದ ಪ್ರಮಾಣ. ನಮ್ಮ ಅನುಭವಕ್ಕೆ ಬರುವ ಪ್ರತಿ ಪದಾರ್ಥದ ಜ್ಞಾನ ಉಂಟಾಗುವುದಕ್ಕೆ ಮೂರು ಅಂಶಗಳೂ ಕಾರಣವಾಗುತ್ತವೆ. ಜ್ಞಾತೃ–ತಿಳಿಯುವವನು, ಜ್ಞೇಯ–ತಿಳಿವಳಿಕೆಗೆ ವಿಷಯವಾದ ವಸ್ತು. ಜ್ಞಾನ–ಜ್ಞಾತೃ, ಜ್ಞೇಯಗಳ ಸಂಪರ್ಕದಿಂದ ಸಂಭವಿಸುವ ತಿಳಿವಳಿಕೆ. ಈ ಮೂರೂ ಅಂಶಗಳು ಸೇರಿದ ಅನುಭವಕ್ಕೆ 'ತ್ರಿಪುಟೀ ಪ್ರತ್ಯಕ್ಷ' ಎಂದು ಪೂರ್ವಿಕರು ಕರೆದುಕೊಂಡರು. ಈ ಸಂಗತಿಯನ್ನು ಒಂದು ವಾಕ್ಯದ ಸಂಗತಿಯಿಂದ ತಿಳಿಯುವ ಯತ್ನವನ್ನು ಮಾಡೋಣ. ನಾನು ಒಂದು ಮರವನ್ನು ನೋಡುತ್ತಿದ್ದೇನೆ ಎಂಬುದು ನಮಗೆ ಆಗುವ ಅನುಭವವಷ್ಟೆ. ಈ ಅನುಭವದಲ್ಲಿ 'ನಾನು' ಎಂಬುದು ಜ್ಞಾತೃ, 'ಮರ' ಎಂಬುದು ಜ್ಞೇಯ, ಮರದ ಅನುಭವವೇ ಜ್ಞಾನ. ಜ್ಞಾತೃ, ಜ್ಞೇಯ, ಜ್ಞಾನ – ಈ ಮೂರರಲ್ಲಿ ಯಾವುದು ಮುಖ್ಯ? ಇವುಗಳ ಪರಸ್ಪರ ಸಂಬಂಧಗಳೇನು? ಇಂಥ ಪ್ರಶ್ನೆಗಳಿಗೆ ನಾನಾಬಗೆಯ ಉತ್ತರಗಳು ಕಾಣಿಸಿಕೊಂಡದ್ದುಂಟು. ಪ್ರಮೆ ಮತ್ತು ಭ್ರಮೆ ಎಡರ ಮೂಲಕವೇ ತತ್ತ್ವಜಿಜ್ಞಾಸೆ ಪ್ರಾರಂಭವಾಯಿತು. ನಮ್ಮ ವೈದಿಕದರ್ಶನಗಳೂ ಅವೈದಿಕ ದರ್ಶನಗಳೂ ಈ ವಿಚಾರ ಗರ್ಭದ ಮೂಲಕವೇ ತಥ್ಯದ ಸ್ವರೂಪವನ್ನು ತಿಳಿಯುವ ಯತ್ನವನ್ನು ಮಾಡುತ್ತವೆ. ಅದೊಂದು ಬೆರಗು, ವಿಸ್ಮಯ, ಆನಂದಗಳನ್ನು ತಂದುಕೊಡುವ ತತ್ತ್ವಲೋಕದ ಪ್ರಪಂಚವೇ ಸರಿ.

**■ ಪುರಂಜೀವಿ**

## ಮಾತೇ ಮುತ್ತು

- ತಿಳಿಯಲು ತಿರಸ್ಕರಿಸುವುದು ಜೀವಿಸಲು ತಿರಸ್ಕರಿಸುವುದಕ್ಕೆ ಸಮನಾದುದು.
  
  –ರಾಮಕೃಷ್ಣ ಪರಮಹಂಸ

- ಬೇಸರಕ್ಕೆ ಕುತೂಹಲವೇ ಔಷಧಿ. ಕುತೂಹಲಕ್ಕೆ ಯಾವ ಔಷಧಿಯೂ ಇಲ್ಲ.
  
  –ಎಲೆನ್ ಪಾರ್

- ಸುಖದ ದಾಹ ಮನೆಯೊಳಗೆ ಅತಿಥಿಯಂತೆ ಬರುತ್ತದೆ, ಬಳಿಕ ಆತಿಥೇಯನಾಗುತ್ತದೆ. ಕೊನೆಗೆ ಮನೆಯನ್ನೇ ಆಳುತ್ತದೆ.
  
  –ಖಲೀಲ್ ಗಿಬ್ರಾನ್

- ದಿನಕ್ಕೆ ಒಮ್ಮೆಯಾದರೂ ನೀವು ನಿಮ್ಮ ಜೊತೆ ಮಾತನಾಡಿಕೊಳ್ಳಬೇಕು. ಇಲ್ಲದಿದ್ದರೆ ನೀವು ಈ ಪ್ರಪಂಚದಲ್ಲಿ ಒಬ್ಬ ಅದ್ಭುತ ವ್ಯಕ್ತಿಯ ಭೇಟಿಯನ್ನು ಕಳೆದುಕೊಳ್ಳುವಿರಿ.
  
  –ಸ್ವಾಮಿ ವಿವೇಕಾನಂದ

- ನಿಮಗೆ ಸೂರ್ಯನಂತೆ ಮಿಂಚುವ ಆಸೆಯಿದ್ದರೆ, ಮೊದಲು ಸೂರ್ಯನಂತೆ ಉರಿಯುವುದನ್ನು ಕಲಿಯಬೇಕು.
  
  –ಅಬ್ದುಲ್ ಕಲಾಂ

- ಆಸೆಗಳು ಲೋಹದ ನಾಣ್ಯಗಳಿದ್ದಂತೆ. ಅವು ಹೆಚ್ಚುತ್ತಾ ಹೋದಂತೆ ಕಿಸೆಯ ಭಾರ ಹೆಚ್ಚಾಗಿ ಮನುಷ್ಯ ಅದನ್ನು ಹೊರಲಾರದ ಸ್ಥಿತಿ ತಲುಪುತ್ತಾನೆ.
  
  –ಸಾಯಿ ಬಾಬಾ

- ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಎಂಬುದು ನನಗೆ ಬೇಕಿಲ್ಲ. ಮನುಷ್ಯರ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಎಂಬುದು ನನಗೆ ಬೇಕು.
  
  –ಅಂಬೇಡ್ಕರ್